**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 1537/2017**

ಚಾಸಾಃ 2
ಫ್ರಾಸಾಃ 1

**ದಿನಾಂಕಃ 09-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಶಂಕ್ರಪ್ಪ |
| ತಂದೆಯ/ಗಂಡನ ಹೆಸರು | ಃ | ಚಿಕ್ಕಪಾಲ |
| ವಯಸ್ಸು | ಃ | 55 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಹುಚ್ಚನಹಟ್ಟಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ಆರೋಪಿ ನನಗೆ ಗೊತ್ತು ಅವರು ನನ್ನ ಅಣ್ಣನ ಮಗ. ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿ ಅದರಲ್ಲಿ ಅವರ ಸಹಿ ಇರುವುದನ್ನು ನೋಡಿ ಒಪ್ಪಿರುತ್ತಾರೆ ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿರುತ್ತದೆ ನಾನು ಪೊಲೀಸ್ ಠಾಣೆಗೆ ಹೋದಾಗ ಸದರಿ ದಾಖಲಾತಿಗೆ ಪೊಲೀಸರು ನನ್ನ ಸಹಿಯನ್ನು ಮಾಡಿಸಿರುತ್ತಾರೆ. ಸಾಕ್ಷಿಯು ಸದರಿ ಸಹಿಗಳನ್ನು ಒಪ್ಪಿರುವುದರಿಂದ ನಿಪಿ-1 ಮತ್ತು 2 ಎಂದು ಅವರ ಸಹಿಗಳನ್ನು ನಿಪಿ-1(ಎ) ಮತ್ತು 2(ಎ) ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷದಿಂದ ಈ ಕೇಸಿನಲ್ಲಿ ಒಳಗಾಗಿರುವ ಯಾವುದೇ ಟೆಟ್ರಾ ಪ್ಯಾಕೇಟ್ ಗಳನ್ನು ಮತ್ತು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದುಕೊಂಡಿಲ್ಲ ನ್ಯಾಯಾಲಯದ ಮುಂದೆ ಇರುವ 4 ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ **11-08-2017** ರಂದು ನಾನು ಮತ್ತು ನನ್ನ ಗ್ರಾಮದ ತಿಮ್ಮಯ್ಯ ಚಾಸಾ-**3** ರವರು ಕೆಲಸದ ನಿಮಿತ್ತವಾಗಿ ತಿಪಟೂರು ಸರ್ಕಾರಿ ಆಸ್ಪತ್ರೆಯ ಮುಂಭಾಗ ಮಾತನಾಡಿಕೊಂಡು ನಿಂತಿದ್ದಾಗ ತಿಪಟೂರು ಗ್ರಾಮಾಂತ ಪೊಲೀಸರು ಬಂದು ನಮ್ಮಗಳನ್ನು ಠಾಣೆಯ ಅಧಿಕಾರಿಗಳು ಠಾಣೆಗೆ ಕರೆಯುತ್ತಿದ್ದಾರೆ ನೀವುಗಳು ಠಾವಣೆಗೆ ಬನ್ನಿ ಎಂದು ತಿಳಿಸಿದ ಮೇರೆಗೆ ನಾವುಗಳು ಠಾಣೆಗೆ ಹೋದೆವು ಅಲ್ಲಿ ಈ ಕೇಸಿನ ವಿಚಾರವನ್ನು ತಿಳಿಸಿ ಅಮಾನತ್ತು ಪಂಚನಾಮೆಗೆ ಸಹಕರಿಸಲು ತುಮಕೂರು ಜಿಲ್ಲಾ ಅಪರಾಧ ವಿಭಾಗಾದ ಪೊಲೀಸ್ ಠಾಣೆಯ ಹೆಚ್ ಸಿ **48** ಚಾಸಾ-**1** ರವರು ಮತ್ತು ಚಾಸಾ-**6** ರವರು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಂಜೆ **4-30** ಗಂಟೆ ಸಮಯಕ್ಕೆ ತಿಪಟೂರು ತಾಲೂಕಿಗೆ ಹಗಲು ಗಸ್ತಿಗೆ ನೇಮಕಕೊಂಡು ನೇಮಕದಂತೆ ತಿಪಟೂರಿಗೆ ಆಗಮಿಸಿ ನಂತರ ತಿಪಟೂರು ಕಲ್ಕೆರೆ ರಸ್ತೆಯಲ್ಲಿ ಕಲ್ಕೆರೆಯಿದ ಗಸ್ತು ಮಾಡಿಕೊಂಡು ವಾಪಾಸ್ಸು ಬರುತ್ತಿರುವಾಗ ಸುಮಾರು **4** ಗಂಟೆ ಸಮಯಕ್ಕೆ ಆದಿಲಕ್ಷ್ಮೀನಗರದ ಹತ್ತಿರ ತಿಪಟೂರು ಕಡೆಯಿಂದ ನಮ್ಮ ಎದುರಿಗೆ ಒಬ್ಬ ಆಸಾಮಿಯು ನೋಂದಣಿ ಸಂಖ್ಯೆ ಇಲ್ಲದ ಹೋಂಡಾ ಆಕ್ಟಿವಾ ಬ್ಲಾಕ್ ಕಲರ್ ದ್ವಿಚಕ್ರ ವಾಹನದಲ್ಲಿ ರಟ್ಟಿನ **4** ಬಾಕ್ಸ್ ಗಳನ್ನು ಇಟ್ಟುಕೊಂಡು ಬರುತ್ತಿದ್ದವನನ್ನು ನೋಡಿ ಅನುಮಾನ ಬಂದು ನಿಲ್ಲಿಸಿ ಹೆಸರು ಮತ್ತು ವಿಳಾಸವನ್ನು ವಿಚಾರವಾಗಿ ಅವರ ಹೆಸರು ಬಸವರಾಜು ಬಿನ್ ಚನ್ನಯ್ಯ, ಹುಚ್ಚನಹಟ್ಟಿ ಕಸಬಾ ಹೋಬಳಿ ತಿಪಟೂರು ತಾಲೂಕು ಎಂದು ತಿಳಿಸಿರುತ್ತಾರೆ ನಂತರ ಬಾಕ್ಸ್ ನಲ್ಲಿರುವ ವಸ್ತುವಿನ ಬಗ್ಗೆ ಕೇಳಲಾಗಿ ಮಧ್ಯದ ಬಾಟಲುಗಳೆಂದು ತಿಳಿಸಿರುತ್ತಾರೆ ಅದನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪರವಾನಿಗೆ ಇಲ್ಲ ಎಂದು ತಿಳಿಸಿದ ಮೇರೆಗೆ ಅವರ ವಶದಿಂದ ಹೈ ವಾರ್ಡ ಕಂಪನಿಯ **90** ಎಂ ಎಲ್ ನ **192** ಮಧ್ಯದ ಟೆಟ್ರಾ ಪ್ಯಾಕೇಟ್ ಗಳು, ಬ್ಯಾಗ್ ಪೈಪರ್ ಕಂಪನಿಯ **180** ಮಿಲಿಯ **24** ಟೆಟ್ರಾ ಪ್ಯಾಕೇಟ್ ಗಳು, **8** ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು **180** ಮಿಲಿಯ **24** ಮಧ್ಯದ ಟೆಟ್ರಾ ಪ್ಯಾಕೇಟ್ ಗಳು, ನಾಕ್ ಔಟ್ ಸ್ಟ್ರಾಂಗ್ ಬಿಯರ್ **330** ಎಂಎಲ್ನ **24** ಟಿನ್ ಗಳನ್ನು ಒಟ್ಟು ಸೇರಿ ಅಂದಾಜು ಬೆಲೆ **10,676** ನ್ನು ವಶಕ್ಕೆ ಪಡೆದುಕೊಂಡು ಅದರಿಂದ **4** ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ಬಿಳಿ ಬಣ್ಣದ ಚೀಲದಲ್ಲಿ ದಾರಹಾಕಿ ಅರಗಿನಿಂದ ಹೆಚ್ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ಸೀಲು ಮಾಡಿದ ನಂತರ ಅದರ ಮೇಲೆ ಬಿಳಿ ಕಾಗದದ ಚೀಟಿಯ ಮೇಲೆ ನನ್ನ ಮತ್ತು ಚಾಸಾ-**3** ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಬಾಟಲುಗಳನ್ನು ಮತ್ತು ಟೆಟ್ರಾ ಪ್ಯಾಕೇಟ್ ಗಳನ್ನು ದ್ವಿಚಕ್ರ ವಾಹನದ ಸಂಹ್ಯೆ ಚಾಸಿ ನಂ. ಎಂವಿ **4** ಜೆಎಫ್ **505** ಎಫ್ ಜಿ ಟಿ **458739** ಇಂಜಿನ್ ಸಂಖ್ಯೆ ಜೆಎಫ್ **50** ಇಟಿ **3458867** ಅವರ ವಶಕ್ಕೆ ನಿಪಿ-**1** ರ ಮೇರೆಗೆ ಸಂಜೆ **5** ರಿಂದ **6** ಗಂಟೆವರೆಗೂ ಗಣಕಯಂತ್ರದಲ್ಲಿ ಟೈಪ್ ಮಾಡಿ

ಪ್ರಿಂಟ್ ಔಟ್ ನ್ನು ನಮ್ಮ ಸಮಕ್ಷಮದಲ್ಲಿ ತೆಗೆದು ಸಹಿಯನ್ನು ಪಡೆದಿದಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ **12-08-2017** ರಂದು ತಿಪಟೂರು ತಾಲೂಕು ಕಸಬಾ ಹೋಬಳಿ ಆದಿಲಕ್ಷ್ಮೀನನಗರ ತಿಪಟೂರು-ಹುಚ್ಚನಹಟ್ಟಿ ರಸ್ತೆ ಮಹಾವೀರ ಹಾಲಿನ ಕೇಂದ್ರದ ಮುಂಭಾಗದ ರಸ್ತೆಯಲ್ಲಿ ಸ್ಥಳ ಪಂಚನಾಮೆಯನ್ನು ಬೆಳಗ್ಗೆ **10** ರಿಂದ **10-30** ಗಂಟೆವರೆಗೂ ನನ್ನ ಮತ್ತು ಚಾಸಾ-**3** ಮತ್ತು **1** ರವರ ಸಮಕ್ಷಮದಲ್ಲಿ ಬರೆದಿದಾರೆ ತದನಂತರ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದೀನಿ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಟೆಟ್ರ್ರಾ ಪ್ಯಾಕೇಟ್ ಗಳನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-**3** ಎಂದು ಗುರುತಿಸಲಾಯಿತು. ಆರೋಪಿ ನನ್ನ ಅಣ್ಣನ ಮಗ ಇರುವ ಕಾರಣದಿಂದ ನನ್ನ ಸಮಕ್ಷಮದಲ್ಲಿ ಆರೋಪಿ ವಶದಿಂದ ಮೇಲೆ ಹೇಳಿರುವ ಮದ್ಯದ ಟೆಟ್ರಾ ಪ್ಯಾಕೇಟ್ಸ್ ಗಳು ಬಿಯರ್ ಟಿನ್ ಗಳನ್ನು ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 1537/2017**

ಚಾಸಾಃ 3
ಫ್ರಾಸಾಃ 2

**ದಿನಾಂಕಃ 09-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ತಿಮ್ಮಯ್ಯ |
| ತಂದೆಯ/ಗಂಡನ ಹೆಸರು | ಃ | ಮಹಲಿಂಗಯ್ಯ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಹುಚ್ಚನಹಟ್ಟಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ಆರೋಪಿ ನನಗೆ ಗೊತ್ತು ಅವರು ನನ್ನ ಅಣ್ಣನ ಮಗ. ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿ ಅದರಲ್ಲಿ ಅವರ ಸಹಿ ಇರುವುದನ್ನು ನೋಡಿ ಒಪ್ಪಿರುತ್ತಾರೆ ಅದು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿರುತ್ತದೆ ನಾನು ಪೊಲೀಸ್ ಠಾಣೆಗೆ ಹೋದಾಗ ಸದರಿ ದಾಖಲಾತಿಗೆ ಪೊಲೀಸರು ನನ್ನ ಸಹಿಯನ್ನು ಮಾಡಿಸಿರುತ್ತಾರೆ. ಸಾಕ್ಷಿಯು ಸದರಿ ಸಹಿಗಳನ್ನು ಒಪ್ಪಿರುವುದರಿಂದ ಅವುಗಳನ್ನು ಈಗಾಗಲೇ ನಿಪಿ-**1** ಮತ್ತು **2** ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಗಳನ್ನು ನಿಪಿ-**1(**ಬಿ**)** ಮತ್ತು **2(**ಬಿ**)** ಗುರುತಿಸಲಾಯಿತು. ನಿಪಿ-**1** ಮತ್ತು **2** ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ. ನನ್ನ ಸಮಕ್ಷದಿಂದ ಈ ಕೇಸಿನಲ್ಲಿ ಒಳಗಾಗಿರುವ ಯಾವುದೇ ಟೆಟ್ರಾ ಪ್ಯಾಕೇಟ್ ಗಳನ್ನು ಮತ್ತು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆದುಕೊಂಡಿಲ್ಲ ನ್ಯಾಯಾಲಯದ ಮುಂದೆ ಇರುವ **4** ಮದ್ಯದ ಟೆಟ್ರಾ ಪ್ಯಾಕೇಟ್ ಗಳನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ. ಈ ವಿಚಾರವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ದಿಃ **11-08-2017** ರಂದು ನಾನು ಮತ್ತು ನನ್ನ ಗ್ರಾಮದ ಶಂಕ್ರಪ್ಪ ಚಾಸಾ**2** ರವರು ಕೆಲಸದ ನಿಮಿತ್ತವಾಗಿ ತಿಪಟೂರು ಸರ್ಕಾರಿ ಆಸ್ಪತ್ರೆಯ ಮುಂಭಾಗ ಮಾತನಾಡಿಕೊಂಡು ನಿಂತಿದ್ದಾಗ ತಿಪಟೂರು ಗ್ರಾಮಾಂತರ ಪೊಲೀಸರು ಬಂದು ನಮ್ಮಗಳನ್ನು ಠಾಣೆಯ ಅಧಿಕಾರಿಗಳು ಠಾಣೆಗೆ ಕರೆಯುತ್ತಿದ್ದಾರೆ ನೀವುಗಳು ಠಾವಣೆಗೆ ಬನ್ನಿ ಎಂದು ತಿಳಿಸಿದ ಮೇರೆಗೆ ನಾವುಗಳು ಠಾಣೆಗೆ ಹೋದೆವು ಅಲ್ಲಿ ಈ ಕೇಸಿನ ವಿಚಾರವನ್ನು ತಿಳಿಸಿ ಅಮಾನತ್ತು ಪಂಚನಾಮೆಗೆ ಸಹಕರಿಸಲು ತುಮಕೂರು ಜಿಲ್ಲಾ ಅಪರಾಧ ವಿಭಾಗಾದ ಪೊಲೀಸ್ ಠಾಣೆಯ ಹೆಚ್ ಸಿ **48** ಚಾಸಾ-**1** ರವರು ಮತ್ತು ಚಾಸಾ-**6** ರವರು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಂಜೆ **4-30** ಗಂಟೆ ಸಮಯಕ್ಕೆ ತಿಪಟೂರು ತಾಲೂಕಿಗೆ ಹಗಲು ಗಸ್ತಿಗೆ ನೇಮಕಕೊಂಡು ನೇಮಕದಂತೆ ತಿಪಟೂರಿಗೆ ಆಗಮಿಸಿ ನಂತರ ತಿಪಟೂರು ಕಲ್ಕೆರೆ ರಸ್ತೆಯಲ್ಲಿ ಕಲ್ಕೆರೆಯಿದ ಗಸ್ತು ಮಾಡಿಕೊಂಡು ವಾಪಾಸ್ಸು ಬರುತ್ತಿರುವಾಗ ಸುಮಾರು **4** ಗಂಟೆ ಸಮಯಕ್ಕೆ ಆದಿಲಕ್ಷ್ಮೀನಗರದ ಹತ್ತಿರ ತಿಪಟೂರು ಕಡೆಯಿಂದ ನಮ್ಮ ಎದುರಿಗೆ ಒಬ್ಬ ಆಸಾಮಿಯು ನೋಂದಣಿ ಸಂಖ್ಯೆ ಇಲ್ಲದ ಹೋಂಡಾ ಆಕ್ಟಿವಾ ಬ್ಲಾಕ್ ಕಲರ್ ದ್ವಿಚಕ್ರ ವಾಹನದಲ್ಲಿ ರಟ್ಟಿನ **4** ಬಾಕ್ಸ್ ಗಳನ್ನು ಇಟ್ಟುಕೊಂಡು ಬರುತ್ತಿದ್ದವನನ್ನು ನೋಡಿ ಅನುಮಾನ ಬಂದು ನಿಲ್ಲಿಸಿ ಹೆಸರು ಮತ್ತು ವಿಳಾಸವನ್ನು ವಿಚಾರವಾಗಿ ಅವರ ಹೆಸರು ಬಸವರಾಜು ಬಿನ್ ಚನ್ನಯ್ಯ, ಹುಚ್ಚನಹಟ್ಟಿ ಕಸಬಾ ಹೋಬಳಿ ತಿಪಟೂರು ತಾಲೂಕು ಎಂದು ತಿಳಿಸಿರುತ್ತಾರೆ ನಂತರ ಬಾಕ್ಸ್ ನಲ್ಲಿರುವ ವಸ್ತುವಿನ ಬಗ್ಗೆ ಕೇಳಲಾಗಿ ಮದ್ಯದ ಬಾಟಲುಗಳೆಂದು ತಿಳಿಸಿರುತ್ತಾರೆ ಅದನ್ನು ಹೊಂದಲು ಪರವಾನಿಗೆ ಇದೆಯಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪರವಾನಿಗೆ ಇಲ್ಲ ಎಂದು ತಿಳಿಸಿದ ಮೇರೆಗೆ ಅವರ ವಶದಿಂದ ಹೈ ವಾರ್ಡ ಕಂಪನಿಯ **90** ಎಂ ಎಲ್ ನ **192** ಮದ್ಯದ ಟೆಟ್ರಾ ಪ್ಯಾಕೇಟ್ ಗಳು, ಬ್ಯಾಗ್ ಪೈಪರ್ ಕಂಪನಿಯ **180** ಮಿಲಿಯ **24** ಟೆಟ್ರಾ ಪ್ಯಾಕೇಟ್ ಗಳು, **8** ಪಿಎಂ ವಿಸ್ಕಿಯ ಟೆಟ್ರಾ ಪ್ಯಾಕೇಟ್ ಗಳು **180** ಮಿಲಿಯ **24** ಮದ್ಯದ ಟೆಟ್ರಾ ಪ್ಯಾಕೇಟ್ ಗಳು, ನಾಕ್ ಔಟ್ ಸ್ಟ್ರಾಂಗ್ ಬಿಯರ್ **330** ಎಂಎಲ್ನ **24** ಟಿನ್ ಗಳನ್ನು ಒಟ್ಟು ಸೇರಿ ಅಂದಾಜು ಬೆಲೆ **10,676** ನ್ನು ವಶಕ್ಕೆ ಪಡೆದುಕೊಂಡು ಅದರಿಂದ **4** ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ಬಿಳಿ ಬಣ್ಣದ ಚೀಲದಲ್ಲಿ ದಾರಹಾಕಿ ಅರಗಿನಿಂದ ಹೆಚ್ ಎಂಬ ಆಂಗ್ಲ ಅಕ್ಷರದಿಂದ ಸೀಲು ಮಾಡಿ ಸೀಲು ಮಾಡಿದ ನಂತರ ಅದರ ಮೇಲೆ ಬಿಳಿ ಕಾಗದದ ಚೀಟಿಯ ಮೇಲೆ ನನ್ನ ಮತ್ತು ಚಾಸಾ-**2** ರವರ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಬಾಟಲುಗಳನ್ನು ಮತ್ತು ಟೆಟ್ರಾ ಪ್ಯಾಕೇಟ್ ಗಳನ್ನು ದ್ವಿಚಕ್ರ ವಾಹನದ ಸಂಖ್ಯೆ ಚಾಸಿ ನಂ. ಎಂವಿ **4** ಜೆಎಫ್ **505** ಎಫ್ ಜಿ ಟಿ **458739** ಇಂಜಿನ್ ಸಂಖ್ಯೆ ಜೆಎಫ್ **50** ಇಟಿ **3458867**

ಅವರ ವಶಕ್ಕೆ ನಿಪಿ-1 ರ ಮೇರೆಗೆ ಸಂಜೆ 5 ರಿಂದ 6 ಗಂಟೆವರೆಗೂ ಗಣಕಯಂತ್ರದಲ್ಲಿ ಟೈಪ್ ಮಾಡಿ ಪ್ರಿಂಟ್ ಔಟ್ ನ್ನು ನಮ್ಮ ಸಮಕ್ಷಮದಲ್ಲಿ ತೆಗೆದು ಸಹಿಯನ್ನು ಪಡೆದಿದಾರೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ದಿಃ 12-08-2017 ರಂದು ತಿಪಟೂರು ತಾಲೂಕು ಕಸಬಾ ಹೋಬಳಿ ಆದಿಲಕ್ಷ್ಮೀನನಗರ ತಿಪಟೂರು-ಹುಚ್ಚನಹಟ್ಟಿ ರಸ್ತೆ ಮಹಾವೀರ ಹಾಲಿನ ಕೇಂದ್ರದ ಮುಂಭಾಗದ ರಸ್ತೆಯಲ್ಲಿ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 10 ರಿಂದ 10-30 ಗಂಟೆವರೆಗೂ ನನ್ನ ಮತ್ತು ಚಾಸಾ-2 ಮತ್ತು 1 ರವರ ಸಮಕ್ಷಮದಲ್ಲಿ ಬರೆದಿದಾರೆ ತದನಂತರ ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದೀನಿ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಟೆಟ್ರಾ ಪ್ಯಾಕೇಟ್ ಗಳನ್ನು ನನ್ನ ಸಮಕ್ಷಮದಲ್ಲಿ ಅಮಾನತ್ತು ಪಡಿಸಿಕೊಂಡಿಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿ ನನ್ನ ಅಣ್ಣನ ಮಗ ಇರುವ ಕಾರಣದಿಂದ ನನ್ನ ಸಮಕ್ಷಮದಲ್ಲಿ ಆರೋಪಿ ವಶದಿಂದ ಮೇಲೆ ಹೇಳಿರುವ ಮದ್ಯದ ಟೆಟ್ರಾ ಪ್ಯಾಕೇಟ್ಸ್ ಗಳು ಬಿಯರ್ ಟಿನ್ ಗಳನ್ನು ದ್ವಿಚಕ್ರ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.